VIJAYAKUMAR KANNUR
Digitally signed by VIJAYAKUMAR KANNUR
Date: 2025.07.19 10:33:10 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 18.07.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಜಿ ಎಸ್ ಪಿ ವಕೀಲರಿಂದ :**

ಪ್ರತಿವಾದಿ 1 ವಿನ ತಂದೆ ಹಣಮಪ್ಪನಿಗೆ 3 ಜನ ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣು ಮಗಳು ಎಂದರೆ ಸರಿ. ಹಣಮಪ್ಪ 1992 ನೇ ಸಾಲಿನಲ್ಲಿ ಮೃತ ಪಟ್ಟಿರುವನು ಎಂದರೆ ಸರಿ. ಹಣಮಪ್ಪನ ಆಸ್ತಿಗೆ ಪ್ರತಿವಾದಿ 1, 4 ರಿಂದ 6 ರವರು ವಾರಸುದಾರರು ಎಂದರೆ ಸರಿ . ಹಣಮಪ್ಪನಿಗೆ ಹಿರಿಯರಿಂದ ಆಸ್ತಿ ಬಂದಿತ್ತು ಎಂದರೆ ಸರಿ. ಪ್ರತಿವಾದಿ 6 ತನ್ನ ಹಕ್ಕನ್ನು ತನ್ನ ಸಹೋದರರಾದ ಪ್ರತಿವಾದಿ 1, 4 ವತ್ತು 5 ರವರಿಗೆ ಬಿಟ್ಟುಕೊಟ್ಟಿರುವಳು ಎಂದರೆ ಸರಿ. ಈ ದಾವಾ ಮನೆಯ ಆಸ್ತಿಯಲ್ಲಿ ಪ್ರತಿವಾದಿ 1, 4 ರಿಂದ 6 ರವರು ಕೂಡಿರೇ ವಾಸವಾಗಿರುವರು ಎಂದರೆ ಸರಿ.

2. ಈಗ ನನಗೆ 36 ವರ್ಷಗಳು ಆಗಿರುವವು. ಪ್ರತಿವಾದಿ 1 ಮತ್ತು ವಾದಿ 4 ರವರ ಜೊತೆ ವಿವಾಹ ಮಾಡಿಕೊಂಡಿರುವನು ಎಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುವರು . ಇವರ ವೈವಾಹಿಕ ಜೀವನದಿಂದ ಮೃಳ ಹೊಳೆಪ್ಪ ಮತ್ತು ವಾದಿ 1 ರವರು ಜನ್ಮ ತಾಳಿರುವರು ಎಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುವರು . ಹೊಳೆಪ್ಪ ಬುದ್ನಿಕೇಡಿ ಗ್ರಾಮದಲ್ಲಿ ಶಾಲೆ ಕಲಿತಿರುವುದು ಎಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುವರು . ವಾದಿ 1 ರವರು ಬಿದರಿ ಗ್ರಾಮದಲ್ಲಿ ಶಾಲೆ ಕಲಿತಿರುವಳು ಎಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುವರು .

3. ಯಾದವಾಡದ ಹುಲುಕುಂದ ಎಂಬವರು ನನ್ನ ತಾಯಿಯ ಸಂಬಂಧಿಕರು ಎಂದರೆ ಸಾಕ್ಷಿ ತನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುವರು . ಈ ಯಾದವಾಡದ ಹುಲಕುಂದ

ಎಂಬುವವರು ಬುದ್ದಿಕೇಡಿ ಗ್ರಾಮದ ರಂಗನಗೌಡ ನ್ಯಾಮಗೌಡ ಇವರ ಜಮೀನನ್ನು ಲಾವಣಿ ತರಿಕೆಯಿಂದ ಸಾಗುವಳಿ ಮಾಡುತ್ತಿದ್ದರು ಎಂದರೆ ಸಾಕ್ಷಿ ತನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುವರು . ನನ್ನ ತಾಯಿ ಹುಲಕುಂದ ರವರ ಸಂಬಂದಿಧ ಆಗಿರುವುದರಿಂದ ಬುದ್ನಿಕೇಡಿ ಗ್ರಾಮದ ರಂಗನಗೌಡ ಜಮೀನಿನಲ್ಲಿ ಬಂದು ವಾಸವಾಗಿದ್ದಳು ಎಂದರೆ ಸರಿ. ಪ್ರತಿವಾದಿ 1 ವಾದಿ 4 ರವರ ವೈವಾಹಿಕ ಜೀವನದೊಂದಿಗೆ ಇಬ್ಬರು ಮಕ್ಕಳು ಜನ್ಮ ತಾಳಿದ ನಂತರ ಪ್ರತಿವಾದಿ 1 ರಮರ ದುಶ್ಚಟಗಳಿಗೆ ಬಲಿಯಾಗಿದ್ದನು ಎಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುವರು .ಆಗ ನನ್ನ ತಾಯಿ ಪ್ರತಿವಾದಿ 1 ವಿನ ಜೊತೆ ಸಂಬಂಧ ಬೆಳೆಸಿಕೊಂಡಿದ್ದಳು ಎಂದರೆ ಸರಿಯಲ್ಲ. ಇವರ ಸಂಬಂಧದಿಂದ ನಾನು ಜನ್ಮ ತಳಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು ಪ್ರತಿವಾದಿ 1 ರವರ ವೈವಾಹಿಕ ಜೀವನದಿಂದ ತಾನು ಜನ್ಮ ತಾಳಿರುವುದ ಎಂದು ಸಾಕ್ಷಿ ಉತ್ತರಿಸುವರು.

4. ಪ್ರತಿವಾದಿ 1 ಮತ್ತು ವಾದಿ 4 ರವರ ನಡುವೆ ರೆಡ್ಡಿ ಸಂಪ್ರದಾಯ ಪ್ರಕಾರ ವಿವಾಹವಾಗಿದೆ ಎಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುವರು . ಇವರ ವಿವಾಹವಾದ ಬಗ್ಗೆ ನನಗೂ ಮತ್ತು ನನ್ನ ತಾಯಿಗೆ ಗೊತ್ತಿದ್ದು, ಅವಳು ನನಗೆ ಹೇಳಿದ್ದರು ಸಹಿತ ನಾನು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಲಿಖಿತ ಪತ್ರವನ್ನು ನನ್ನ ಗಂಡ ಸಲ್ಲಿಸಿರುವನು ಎಂದರೆ ಸರಿಯಲ್ಲ. ನಾವೆಲ್ಲರೂ ಕೂಡಿಯೇ ಸಲ್ಲಿಸಿರುವೆವು . ಆ ಲಿಖಿತ ಪತ್ರದ ಮೇಲೆ ನಾನು, ನನ್ನ ಗಂಡ, ನನ್ನ ತಾಯಿ ಮತ್ತು ಪ್ರತಿವಾದಿ 1 ರವರು ಸಹಿ ಮಾಡಿರುವೆವು.

5. ಬುದ್ನಿಕೇಡಿ ಗ್ರಾಮದ ಜಮೀನುಗಳು ಕೃಷ್ಣ ಮೇಲ್ದಂಡೆ ಗ್ರಾಮದಲ್ಲಿ ಮುಳಗಡೆ ಆಗಿರುವುದು ಎಂದರೆ ಸರಿ. ಪ್ರತಿವಾದಿ 1 ಮದ್ಯ ಸೇವನೆ ಮಾಡುತ್ತಿರುವುದರಿಂದ ಅದರ ದುರುಪಯೋಗಪಡಿಸಿಕೊಂಡು ನನ್ನ ತಾಯಿ ತನ್ನ ಹೆಸರಿನಲ್ಲಿ ನೊಂದಾಯಿತ ವಲ್ಲದ ದಾಖಲೆಯಿಂದ ಹಕ್ಕು ಬದಲಾವಣೆ ಮಾಡಿಕೊಂಡಿರುವಳು ಎಂದರೆ ಸರಿಯಲ್ಲ. ಅವನು ಪ್ರೀತಿ ಅಕ್ಕರೆಯಿಂದ ಮಾಡಿರುವುದು ಸಾಕ್ಷಿ ಉತ್ತರಿಸುವರು. ಪ್ರತಿವಾದಿ 1 ರವರಿಗೆ ಹೆಂಡತಿ

ಮತ್ತು ಇಬ್ಬರು ಮಕ್ಕಳು ಇದ್ದರು ಸಹಿತ ನನ್ನ ತಾಯಿ ಈ ಖೊಟ್ಟಿಯಾಗಿ ದಾಖಲೆ ಸೃಷ್ಟಿ ಮಾಡಿಕೊಂಡಿರುವಳು ಎಂದರೆ ಸರಿಯಲ್ಲ. ಈ ಜಮೀನು ಕೃಷ್ಣ ನದಿಗೆ ಇರುವರಿಂದ ಆ ಪರಿಹಾರ ಹಣವನ್ನು ಎತ್ತಿಹಾಕುವ ಸಲುವಾಗಿ ನಾನು ಮತ್ತು ನನ್ನ ಗಂಡ ಕೂಡಿಕೊಂಡು ಈ ಸುಳ್ಳು ಲಿಖಿತ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 1 ರವರು ನನ್ನ ತಾಯಿಯ ಹೆಸರಿನಲ್ಲಿ 1 ಎಕರೆ ಜಮೀನು ಬಿಟ್ಟುಕೊಡಲು ಆತನಿಗೆ ಯಾವುದೇ ಕಾನೂನು ಬದ್ದ ವಾದ ಹಕ್ಕು ಇರುವುದಿಲ್ಲ ಮತ್ತು ಅದು ಕಾನೂನು ಬದ್ದವಾಗಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 1 ಮತ್ತು ನನ್ನ ತಾಯಿಗೆ 1 ಎಕರೆ 30 ಗುಂಟೆ ಜಮೀನನ್ನು ನನ್ನ ಹೆಸರಿನಲ್ಲಿಬಕ್ಷಿಸ್ ಪತ್ರ ಮಾಡಿಕೊಡಲು ಅವರಿಗೆ ಹಕ್ಕು ಸಹ ಇರುವುದಿಲ್ಲ ಮತ್ತು ಅದು ಕಾನೂನು ಬದ್ದವಾಗಿರುವುದಿಲ್ಲ ಎಂದರೆ ಸರಿಯಲ್ಲ.

6. ಪ್ರತಿವಾದಿ 1 ರಮರ ಮೃತ ಪಡುವ ವರೆಗೂ ದಾವಾ ಆಸ್ತಿಗಳು ಅವನ ಮತ್ತು ವಾದಿಯರ ಕಬ್ಜೆಯಲ್ಲಿಇದ್ದವು ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಪ್ರತಿವಾದಿ 1 ರವರಿಗೆ ಹಿರಿಯರಿಂದ ಬಂದ ಜಂಟಿ ಕುಟುಂಬದ ಆಸ್ತಿ ಎಂದರೆ ಸರಿ. ಹೊಳೆಯಪ್ಪ ದಿಃ 15.04.2021 ಮೃತ ಪಟ್ಟಿರುವರು ಎಂದರೆ ಸಾಕ್ಷಿ ತನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುವರು. ಇತನಿಗೆ ವಾದಿ 2 ಹೆಂಡತಿಯಾಗಿದ್ದು ಹಾಗೂ ವಾದಿ 3 ಮಗಳು ಆಗಿರುವಳು ಎಂದರೆ ಸಾಕ್ಷಿ ತನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುವರು. ನಾನು ನನ್ನ ಗಂಡ, ಮತ್ತು ನನ್ನ ತಾಯಿ ಕೂಡಿಕೊಂಡು ದಾವಾ ಆಸ್ತಿಯನ್ನು ಎತ್ತಿಹಾಕುವ ಸಲುವಾಗಿ ಹಾಗೂ ಗಿರಿಯಪ್ಪ ಮದ್ಯ ವ್ಯಸನಿಯಾಗಿರುವುದನ್ನು ದುರುಪಯೋಗಪಡಿಸಿಕೊಂಡು ಹಕ್ಕು ಬದಲಾವಣೆ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೆ ಗಿರಿಯಪ್ಪ ಜೀವಿತಾವಧಿಯವರೆಗೆ ಆತ ಮತ್ತು ವಾದಿಯರು ಮಾಲೀಕರು ಆಗಿ ಕಬ್ಬೆ ವಹಿವಾಟು ಹೊಂದಿದ್ದು ಈಗ ಆತ ಮೃತ ಪಟ್ಟ ನಂತರ ವಾದಿಯರು ಕಬ್ಜೆ ವಹಿವಾಟು ಮತ್ತು ಮಾಲೀಕರು ಆಗಿರುವರು ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ

VIJAYAKUMAR KANNUR

Digitally signed by VIJAYAKUMAR KANNUR
Date: 2025.07.19 10:33:20 +0530